# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ದಿನೇಶ್ | P.W | 19 |
| ತಂದೆಯ ಹೆಸರು | ದ್ಯಾವಪ್ಪಗೌಡ | C.W | 36 |
| ವಯಸ್ಸು | 58 ವರ್ಷ | | |
| ಉದ್ಯೋಗ | ವ್ಯವಸಾಯ | ಪ್ರ.ವ.ಬೋ | |
| ವಾಸಸ್ಥಳ | ಮಳಲಿ ಗ್ರಾಮ | ದಿನಾಂಕಃ 26.12.2022 | |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 1998 ರಿಂದ 2005 ನೇ ಇಸವಿಯ ವರೆಗೂ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ವಾಟರ್ ಮನ್ ಆಗಿ ಕೆಲಸ ಮಾಡಿಕೊಂಡಿದ್ದೆನು. ನಮ್ಮ ಪಂಚಾಯ್ತಿಯಲ್ಲಿ ಆರೋಪಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ 31 ರಿಂದ 33 , 35 , 37 ರವರೂ ಸಹ ನಮ್ಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣದ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು, ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ.

*(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)*

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ**

ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಸಂತೋಷ್ ಎನ್ನುವವರು ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. **2008** ರಿಂದ **2010** ನೇ ಸಾಲಿನ ಅವಧಿಯಲ್ಲಿ ಲಕ್ಷ್ಮಣ ಶೆಟ್ಟಿ ಅಧ್ಯಕ್ಷರಾಗಿ , ಮರಿಯಮ್ಮ ಉಪಾಧ್ಯಕ್ಷರಾಗಿ , ಗಣೇಶ್ ಎಂಬುವವರು **2008** ರಿಂದ **2009** ನೇ ಸಾಲಿನಲ್ಲಿ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ. ಆರೋಪಿಯು ಬಿಲ್ ಕಲೆಕ್ಟರ್ ಆಗಿದ್ದು , ಅವರು ಗ್ರಾಮ ಪಂಚಾಯ್ತಿಯ ಅಧ್ಯಕ್ಷ ಮತ್ತು ಸದಸ್ಯರೊಂದಿಗೆ ಬಾಂದವ್ಯ ಇಟ್ಟುಕೊಂಡಿದ್ದರು ಎಂದರೆ ಸರಿ. ಅವರ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ಆರೋಪಿಯು ಕಾರ್ಯದರ್ಶಿ ಹಾಗೂ ಅಧ್ಯಕ್ಷರ ಸೀಲು ಮತ್ತು ನಕಲು ಸಹಿಯನ್ನು ಮಾಡಿ , ಯಾರಿಗೂ ಗೊತ್ತಾಗದ ರೀತಿಯಲ್ಲಿ ಪಂಚಾಯ್ತಿ ಅಕೌಂಟ್ನ ಚೆಕ್ ಗಳನ್ನು ಬೇರೆ ಬೇರೆ ಹೆಸರಿನಲ್ಲಿ ಹಣ ಡ್ರಾ ಮಾಡಿಕೊಂಡು ವಂಚನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಆರೋಪಿಯು ಬ್ಯಾಂಕ್ ಗಳಿಗೆ ಹೋಗಿ ಫಲಾನುಭವಿಗಳಲ್ಲದ ಬೇರೆ ಬೇರೆ ಹೆಸರುಗಳನ್ನು ಬರೆದುಕೊಟ್ಟು ಸರ್ಕಾರಕ್ಕೆ ವಂಚಿಸಿ ಹಣ ಡ್ರಾ ಮಾಡುತ್ತಿದ್ದ ಎಂದರೆ ಸರಿಯಲ್ಲ. ಕಾರ್ಯದರ್ಶಿಯವರ ಗಮನಕ್ಕೆ

ಬಾರದಂತೆ ಅವರ ಡ್ರಾವರ್ ನಿಂದ ಕೀ ತೆಗೆದು ಕೊಂಡು ಬೇರು ಬಾಗಿಲು ತೆರೆದು ಚೆಕ್ ಪುಸ್ತಕದಲ್ಲಿ ಮಧ್ಯ ಮಧ್ಯ ಒಂದೊಂದು ಹಾಳೆಯನ್ನು ಹರಿದಿಟ್ಟುಕೊಂಡು ನಂಬಿಕೆ ದ್ರೋಹ ಮಾಡಿ ಸುಮಾರು 14 ಲಕ್ಷಕ್ಕೂ ಮೇಲ್ಪಟ್ಟು ಹಣ ಡ್ರಾ ಮಾಡಿ ಕೊಂಡು ಸ್ವಂತ ಬಳಕೆಗೆ ಉಪಯೋಗಿಸಿಕೊಂಡಿದ್ದು , ನಂತರ ಆತ ತನ್ನ ತಪ್ಪನ್ನು ಒಪ್ಪಿಕೊಂಡು ಒಂದು ಛಾಪಾ ಕಾಗದದಲ್ಲಿ ತಪ್ಪೊಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇದರ ಕುರಿತಂತೆ ಈಗ ಓದಿ ಹೇಳಿದಂತೆ ದಿಃ 15-01-2013 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ 69 ಎಂದು ಗುರುತಿಸಲಾಯಿತು. ನಿಪಿ-69 ರ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಇಲ್ಲ**

**ಮರುವಿಚಾರಣೆಃ-** ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.